

ಈಶ್ವರ ಬಡಿಗೇರ

ಅರಿವಳಿಕೆಯ ವಿಧಾನಗಳನ್ನು ಬಳಸುತ್ತಾರೆ.

ರೋಗಿಯ ವಯಸ್ಸು, ಕಾಯಿಲೆ, ತೂಕ ಹೀಗೆ ಹತ್ತು ಹಲವಾರು ಅಂಶಗಳನ್ನು ಗಮನದಲ್ಲಿಟ್ಟು ಔಷಧಿ ಕೊಟ್ಟು ಗಂಟೆಗಟ್ಟಲೆ, ಕೆಲಸಾರಿ ದಿನಗಟ್ಟಲೆ ಬಿಪಿ ಪಲ್ಸ್ ರಕ್ತದಲ್ಲಿನ ಆಮ್ಲಜನಕದ ಸಾಂದ್ರತೆ, ರೋಗಿಯ ಉಸಿರಾಟದ ನಿಯಂತ್ರಣ ಎಲ್ಲವನ್ನು ಗಮನದಲ್ಲಿಟ್ಟು ಶಸ್ತ್ರಚಿಕಿತ್ಸೆಗೆ ಅನುಕೂಲ ಮಾಡಿ ಕೊಡುವ ಈ ಚಾಣಾಕ್ಷ ಅರಿವಳಿಕೆ ವೈದ್ಯರ ಕೈಯಲ್ಲೇ ಇಡೀ ಶಸ್ತ್ರಚಿಕಿತ್ಸೆಯ ಚುಕ್ಕಾಣಿ. ಸ್ವಲ್ಪ ಏರುಪೇರಾದರೆ ರೋಗಿಯ ಜೀವಕ್ಕೆ ಆಪತ್ತು.

ಹೀಗಿರಲು ಒಂದು ಶಸ್ತ್ರಚಿಕಿತ್ಸಾ ಕೊಠಡಿಯಲ್ಲಿ ಒಂದು ವಿಚಿತ್ರ ಶಸ್ತ್ರಚಿಕಿತ್ಸೆ ನಡೆಯುತಿತ್ತು. ಯುವ ರೈತ ವೆಂಕಟರಾಮನಿಗೆ ಹಸುವೊಂದು ತನ್ನ ತಲೆಯಿಂದ ಹೊಟ್ಟೆಗೆ ಗುದ್ದಿತ್ತು, ಮೇಲ್ನೋಟಕ್ಕೆ ಯಾವ ಗಾಯವಿಲ್ಲದಿದ್ದರೂ ಹೊಟ್ಟೆಯ ಒಳಗೆ ಜಠರದಲ್ಲಿ ಎರಡು ಚಿಕ್ಕ ತೂತಾಗಿದ್ದುದು ಸ್ಕ್ಯಾನ್‌ನಲ್ಲಿ ತಿಳಿದು, ಜನರಲ್ ಅನಸ್ತೇಸಿಯಾದಲ್ಲಿ ಅಂದರೆ ರೋಗಿಯನ್ನು ಪೂರ್ತಿಯಾಗಿ ಪ್ರಜ್ಞೆ ತಪ್ಪಿಸಿ ಜಠರದಲ್ಲಿನ ರಂಧ್ರಗಳನ್ನು ಮುಚ್ಚುವ ಕೆಲಸ ನಡೆದಿತ್ತು.

ಡಾ. ನರಸಿಂಹರವರು ರೋಗಿಯ ಹೊಟ್ಟೆಯಲ್ಲಿನ ಜಠರದ ರಂಧ್ರಗಳನ್ನು ಮುಚ್ಚುವಲ್ಲಿ ಯಶಸ್ವಿಯಾಗಿ, ಆಪರೇಷನ್ ಮುಗಿಯುವ ಸೂಚನೆ ಕೊಟ್ಟರೆ, ಅರಿವಳಿಕೆ ತಜ್ಞ ಡಾ. ಸದಾಶಿವ ಅವರು ರಿವರ್ಸಲ್ ಅಂದರೆ ರೋಗಿಯ ಪ್ರಜ್ಞೆ ಮರುಕಳಿಸುವ ಮದ್ದು ಕೊಟ್ಟು ಮಲಗಿದ್ದ ಯುವಕ ವೆಂಕಟರಾಮನೆಂಬ ರೈತನನ್ನು ಎದ್ದೇಳಿಸುವ ಕೆಲಸ ಮಾಡತೊಡಗಿದರು. ಆದರೆ ಎಷ್ಟೇ ಪ್ರಯತ್ನಿಸಿದರೂ ರೋಗಿಗೆ ಎಚ್ಚರವಾಗಲಿಲ್ಲ, ಮಾತನಾಡಲಿಲ್ಲ. ಎಲ್ಲರಿಗೂ ಆತಂಕ, ಅರಿವಳಿಕೆ ತಜ್ಞ ಡಾ. ಸದಾಶಿವ ಸಣ್ಣದಾಗಿ ಬೆವರಲಾರಂಭಿಸಿದರೆ, ಯಾರೋ 'ಇಸ ಹಿ ಬ್ರೈನ್ ಡೆಡ್' ಎಂದಾಗ ಡಾ. ಸದಾಶಿವ ಅವರಿಗೆ ಹೃದಯಾಘಾತವಾಗುವುದೊಂದೇ ಬಾಕಿ. ಅರಿವಳಿಕೆ ಮದ್ದಿನ ಡೋಸೇಜ್ ಹೆಚ್ಚಾಗಿಯೋ ಅಥವಾ ಉಸಿರಾಟದ ನಿಯಂತ್ರಣ ಮಾಡುವಲ್ಲಿ ಏರುಪೇರಾಗಿ ರೋಗಿಯ ಮೆದುಳಿಗೆ ಆಮ್ಲಜನಕದ ಪೂರೈಕೆ ಸರಿಯಾಗದೆ ಮಿದುಳು ಹಾನಿಗೊಂಡು ನಿಷ್ಕ್ರಿಯವಾಗಿ ಯುವಕ ಜೀವಚ್ಛವವಾದನೆ? ಎಂಬ ಆತಂಕ ಶುರುವಾಗಿ ಎಲ್ಲರೂ ಗಾಬರಿಯಾದರೆ ಡಾ. ಸದಾಶಿವ ತಾವು ಕೊಟ್ಟ ಇಂಜೆಕ್ಷನ್‌ಗಳ ಬಾಟಲ್‌ಗಳ ವಿವರಗಳು ಎಕ್ಸ್‌ಪೈರಿ ದಿನಾಂಕಗಳನ್ನು ಮತ್ತೆ ಮತ್ತೆ ನೋಡಿ ಯಾವ ಅಚಾತುರ್ಯ ನಡೆದಿಲ್ಲ ಎಂದು ಖಚಿತಪಡಿಸಿ ಕೊಳ್ಳುತ್ತಿದ್ದರೆ, ಉಳಿದವರು ರೋಗಿಯನ್ನು ಎಚ್ಚರಿಸುವ ಪ್ರಯತ್ನದಲ್ಲಿದ್ದರು. ರೋಗಿ ಮಿಸುಕಾಡಲಿಲ್ಲ. ಅಷ್ಟರಲ್ಲಿ ಪಕ್ಕದ ಕೋಣೆಯಲ್ಲಿ ಮುರಿದ ಮೂಳೆಯ ಯಶಸ್ವೀ ಜೋಡಣೆ ಮಾಡಿ ತಮ್ಮ ರೋಗಿಯನ್ನು ವಾರ್ಡಿಗೆ ಕಳಿಸಿ ಆನಂದದಿಂದ

'ಈ ದೇಹದಿಂದ ದೂರನಾದೆ ಏಕೆ ಆತ್ಮನೆ..
ಈ ಸಾವು ನ್ಯಾಯವೆ...?
ಈ ಸಾವು ನ್ಯಾಯವೆ...?'

ಎಂದು ಅತ್ಯಂತ ಕೆಟ್ಟದಾಗಿ ಹಾಡುತ್ತ... ಈ ಕೋಣೆಗೆ ಬಂದೇ ಬಿಟ್ಟರು ಸೀನಿಯರ್ ಸರ್ಜನ್, ಮೂಳೆ ವೈದ್ಯ ಡಾ. ನಾರದ ರಾವ್.

ಇಡೀ ತಂಡದವರು ರೋಗಿಯನ್ನು ಎದ್ದೇಳಿಸುವ ಹರಸಾಹಸ ಮಾಡುತ್ತಿದ್ದರೆ ಏನೂ ಅರಿಯದ ಡಾ. ನಾರದ 'ಈ ಸಾವು ನ್ಯಾಯವೇ... ಈ ಸಾವು ನ್ಯಾಯವೇ' ಎಂಬ ಗಾನ ಇನ್ನೂ ಮುಂದುವರೆಸಿದ್ದರು.

ಸರ್ಜನ್ ನರಸಿಂಹ ಮತ್ತು ಡಾ. ಸದಾಶಿವ ಅವರು ಡಾ. ನಾರದರವರನ್ನು ದುರುಗುಟ್ಟಿ ನೋಡಿದಾಗ ಹಾಡು ನಿಲ್ಲಿಸಿ..

'ಯಾಕ್ರೋ ಏನಾಯ್ತು?' ಎಂದಾಗ ಡಾ. ನರಸಿಂಹ 'ಕಾಣ್ಣಲ್ವಾ ಪೇಷಂಟ್ ಎದ್ದೇಳ್ತಾ ಇಲ್ಲ... ಲುಕ್ಸ್ ಲೈಕ್ ಹೀ ಇಸ್ ಬ್ರೈನ್ ಡೆಡ್' ಎಂದರು. ಆಗ 'ಹೌದಾ ?... ಐ ಆ್ಯಮ್ ಸಾರಿ... ಕಣ್ರೋ... ಸಾರಿ ಫಾರ್ ದ ಸಾಂಗ್ ಟೂ...' ಎಂದು ರೋಗಿಯತ್ತ ಹೋಗಿ ಒಂದೇ ಸಮನೆ ಬೆವರುತ್ತಿದ್ದ ಡಾ. ಸದಾಶಿವರಿಗೆ 'ಏನ್ ಕೇಸು?' ಎಂದು ಮೆಲ್ಲಗೆ ಕೇಳಿ ಎಲ್ಲ ವಿವರ ಪಡೆದರು.

'ಅಷ್ಟೇನಾ... ಇಲ್ಲಿ ನೋಡು ಮಜಾ' ಎಂದಾಗ ಡಾ. ನಾರದರವರ ಮಾತಿಗೆ ಎಲ್ಲರೂ ನಖಶಿಕಾಂತ ಉರಿದು ಹೋದರು. ಡಾ. ನಾರದ ತುಂಬಾ ತಮಾಷೆಯ ಮನುಷ್ಯ. ಅದಕ್ಕೆ ಎಲ್ಲರೂ ಸುಮ್ಮನಿದ್ದರು. ಇಂತಹ ಸಮಯದಲ್ಲಿನ ತಮಾಷೆ ಯಾರಿಗೂ ಇಷ್ಟವಾಗಿರಲಿಲ್ಲ. ಕೋಪ ಗಾಬರಿಯಿಂದ ಬೆವರುತ್ತಿದ್ದ ಡಾ. ಸದಾಶಿವರನ್ನು ನೋಡಿ,

'ಏ ಸದಾಶಿವಾ... ಗಾಬರಿಯಾಗಬೇಡ... ಇಲ್ಲಿ ನೋಡು ಮಜಾ...' ಎಂದು ಮಲಗಿದ ರೋಗಿಯ ಹತ್ತಿರ ಬಂದು ಬಗ್ಗಿ, ರೋಗಿಯ ಕಿವಿಯಲ್ಲಿ

'ಏ... ಎಂಕಟರಾಮಾ... ಹಸು ಮತ್ತೆ ಬರ್ತಾ ಇದೆ ಕಣೋ... ಓಡೋ...' ಎಂದು ಜೋರಾಗಿ ಕಿರುಚಿಯೇ ಬಿಟ್ಟರು.

'ಅಮ್ಮಾ... ಕಾಪಾಡಿ... ಅಯ್ಯೋ... ಎಲ್ಲಿ ಹಸು ಕಾಣಸ್ತಾನೆ ಇಲ್ಲಾ?' ಎಂದು ಕಿರುಚುತ್ತ ರೋಗಿ ವೆಂಕಟರಾಮ ಎಚ್ಚರವಾಗಿ ಕಣ್ಣು ಬಿಟ್ಟು ಅತ್ತ ನೋಡುತ್ತ ಆಪರೇಶನ್ ಥಿಯೇಟರ್‌ನಲ್ಲಿ ಹಸುವನ್ನು ಹುಡುಕಲಾರಂಭಿಸಿದರೆ ಇಡೀ ಶಸ್ತ್ರಚಿಕಿತ್ಸಾ ಕೊಠಡಿಯೇ ನಗೆಗಡಲಲ್ಲಿ ತೇಲಲಾರಂಭಿಸಿತು.

'ದಿಸ್ ಈಸ್ ಟೂ ಮಚ್ ನಾರದಾ' ಎಂದು ಡಾ. ನರಸಿಂಹ ಗಹಗಹಿಸಿ ನಗಲಾರಂಭಿಸಿದರೆ ಸ್ಟೂಲ್ ಮೇಲೆ ನಿರುಮ್ಮಳವಾಗಿ ನೆಮ್ಮದಿಯ ಉಸಿರು ಬಿಡುತ್ತಾ ಕುಳಿತ ಡಾ. ಸದಾಶಿವರನ್ನು ನೋಡಿ ಕಣ್ಣು ಮಿಟುಕಿಸಿ,

'ಸಿಸ್ಟರ್, ವಾರ್ಡ್‌ಗೆ ಶಿಫ್ಟ್ ಮಾಡಿ ಪೇಷೆಂಟ್‌ನ' ಎಂದು ಹೇಳಿ ಯಾರ ಉತ್ತರಕ್ಕೂ ಕಾಯದೆ 'ಈ ಸಾವು ನ್ಯಾಯವೇ...ಈ ಸಾವು ನ್ಯಾಯವೇ...' ಎಂದು ಹಾಡುತ್ತ ಹೊರಟು ಹೋದರು ಡಾ. ನಾರದ.

■